ಅಧ್ಯಕ್ಷರು : ಎಲ್ಲಾ ಅರ್ಜಿಗಳನ್ನು ಸಭೆಯ ಮುಂದೆ ಮಂಡಿಸಲಾಯಿತು.

ವರದಿಗಳನ್ನೊಪ್ಪಿಸುವುದು

1. ಶ್ರೀ ವಿ.ಎಸ್. ಕೌಜಲಗಿ : ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಮತ್ತು ನಡವಳಿಕೆಗಳ ನಿಯಮಗಳ ವಿಷಯ ಸಮಿತಿಗಳಿಗೆ ಸಂಬಂಧಿಸಿದಂತೆ ನಿಯಮಗಳ ಸಮಿತಿಯ ವರದಿಯನ್ನೊಪ್ಪಿಸುತ್ತೇನೆ.
2. ಶ್ರೀ ಎಸ್.ಎಂ. ಯಾಹ್ಯಾ : ಮಾನ್ಯ ಅಧ್ಯಕ್ಷರೇ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ವಿಧೇಯಕದ ಜಂಟಿ ಪರಿಶೀಲನಾ ಸಮಿತಿಯ ವರದಿಯನ್ನೊಪ್ಪಿಸುತ್ತೇನೆ.
3. ಶ್ರೀ ಕೆ. ಶಿವಮೂರ್ತಿ : ಮಾನ್ಯ ಅಧ್ಯಕ್ಷರೇ, ವಿಧಾನ ಸಭೆಯ ಹಕ್ಕುಭಾಧ್ಯತಾ ಸಮಿತಿಯ 3ನೇ ಹಾಗೂ 4ನೇ ವರದಿಯನ್ನೊಪ್ಪಿಸುತ್ತೇನೆ.
4. ಶ್ರೀ ಕೆ.ಬಿ. ಕೋಳಿವಾಡ : ಮಾನ್ಯ ಅಧ್ಯಕ್ಷರೇ, ಸಭೆಯ ಮುಂದಿಡಲಾಗುವ ಕಾಗದ ಪತ್ರಗಳ ಸಮಿತಿಯ 12ನೇ ವರದಿಯನ್ನೊಪ್ಪಿಸುತ್ತೇನೆ.

ಅಧ್ಯಕ್ಷರು : ಈ ಎಲ್ಲಾ ವರದಿಗಳನ್ನು ಸಭೆಯ ಮುಂದೆ ಮಂಡಿಸಲಾಯಿತು.

ವಿತ್ತೀಯ ಕಾರ್ಯಕಲಾಪಗಳು

ಶ್ರೀ ಹಾರನಹಳ್ಳಿ ರಾಮಸ್ವಾಮಿ : ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳ ಪರವಾಗಿ

ಅ) "ಭಾರತ ಸಂವಿಧಾನದ 205(1) ಅನುಚ್ಛೇದದ ಮೇರೆಗೆ 1993-94ನೇ ಸಾಲಿಗೆ ಸಂಬಂಧಿಸಿದಂತೆ ಅನುಪೂರಕ ಅಂದಾಜು (ಮೊದಲನೆ ಕಂತು)ಗಳನ್ನು ಸಭೆಯ ಮುಂದೆ ಒಪ್ಪಿಸುತ್ತೇನೆ.

ಆ) "ಭಾರತ ಸಂವಿಧಾನದ 205(1) (ಬ)ಅನುಚ್ಛೇದದ ಮೇರೆಗೆ 1985-86ಹಾಗೂ 1986-87ರಲ್ಲಿ ಪುರಸ್ಕೃತವಾದ ಅನುದಾನ ವಿನಿಯೋಗಗಳಿಗೆ ಮತ್ತು ಪ್ರಬುದ್ಧ ವಿನಿಯೋಗಗಳಿಗೆ ಹೆಚ್ಚಿಗೆಯಾಗಿ ಭರಿಸಿದ ವೆಚ್ಚಗಳನ್ನು ಸಕ್ರಮಗೊಳಿಸುವುದನ್ನು ಸಭೆಗೆ ಒಪ್ಪಿಸುತ್ತೇನೆ.

ಅಧ್ಯಕ್ಷರು : ಸಭೆಯ ಮುಂದೆ ಒಪ್ಪಿಸಲಾಯಿತು, ಈಗ ಭಟ್ಕಳದಲ್ಲಿ ನಡೆದ ಗಲಭೆ ಬಗ್ಗೆ ಪ್ರಸ್ತಾವನೆ. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು.

(ಅ) ಭಟ್ಕಳದಲ್ಲಿ ನಡೆದ ಗಲಭೆ ಬಗ್ಗೆ

+ ಶ್ರೀ ಆರ್.ಎನ್. ನಾಯಕ್ (ಭಟ್ಕಳ) : ಮಾನ್ಯ ಅಧ್ಯಕ್ಷರೇ, ಭಟ್ಕಳದಲ್ಲಿ ಗಲಾಟೆಯಾದ ಬಗ್ಗೆ ನಾನು ನಿಮ್ಮ ಗಮನ ಸೆಳೆಯುತ್ತಿದ್ದೇನೆ. ಮಾನ್ಯ ಮುಖ್ಯಮಂತ್ರಿಯವರು ನಮ್ಮ ಉತ್ತರ ಕನ್ನಡ ಜಿಲ್ಲೆಯ ಶಾಸಕರನ್ನು, ವಿರೋಧ ಪಕ್ಷದ ನಾಯಕರನ್ನು ಕರೆಸಿ ಅದರ ಬಗ್ಗೆ ಚರ್ಚೆ ಮಾಡುತ್ತೇನೆ ಎಂದು ಹೇಳಿದ್ದರು. ಆದರೆ ಅವರಿಗೆ ಸಮಯ ಇದೆಯೋಗ ಇಲ್ಲವೋ ಗೊತ್ತಿಲ್ಲ. 2 ದಿವಸದಿಂದ ಅದು ಮುಂದೆ ಹೋಗುತ್ತಿದೆ. ಬಹುಶಃ ಇವತ್ತು ಸಭೆ ಮುಂದೆ ಹೋದರೆ ಅದರ ವಿಚಾರವಾಗಿ ಇಲ್ಲಿ ನನು ಪ್ರಸ್ತಾಪ ಮಾಡುವುದಕ್ಕೇ ಸಾಧ್ಯವಾಗುವುದಿಲ್ಲ. ಆ ಕಾರಣಕ್ಕಾಗಿ ಈಗ ಮುಂದಿನ ಚರ್ಚೆ ಪ್ರಾರಂಭವಾಗುವುದಕ್ಕೆ ಪೂರ್ವದಲ್ಲಿ, ಭಟ್ಕಳದಲ್ಲಿ ನಡೆಯುತ್ತಿರುವ ಗಲಭೆ ಬಗ್ಗೆ ನಾನು ಗಮನ ಸೆಳೆದ ಬಗ್ಗೆ ಚರ್ಚಿಸಲು ತಾವು ಎಲ್ಲಾ ಕಾರ್ಯಕಲಾಪಗಳನ್ನು ಬದಿಗೊತ್ತಿ, ಇದು ಬಹಳ ಪ್ರಾಮುಖ್ಯವಾದ ವಿಚಾರ ಎಂದು ತಿಳಿದು ತೆಗೆದುಕೊಳ್ಳಬೇಕು. ಅಲ್ಲಿ ಈಗಾಗಲೇ 13 ಜನ ಕೋಮುಗಲಭೆಯಲ್ಲಿ ಸತ್ತಿದ್ದಾರೆ.

ಆ ಕಾರಣಕ್ಕೆ ಒಂದು ವರದಿಯನ್ನು ಕೊಡಬೇಕೆಂದು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೇ, ಅವರು ಹೇಳಿದ್ದು ನಿಜ. ಇದು ಬಹಳ ಮಹತ್ವದ ವಿಷಯವಾಗಿದೆ. ಕಳೆದ 2 ದಿನ ಮಾನ್ಯ ಮುಖ್ಯಮಂತ್ರಿಗಳು ಸಭೆಯನ್ನು ಇಟ್ಟು ಅದನ್ನು ಮುಂದೆ ಹಾಕಿದರು. ಸದನ ನಿನ್ನೆ ದಿವಸ ನಡೆದಿದ್ದು 7 ಗಂಟೆ ತನಕ ಎಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಪುನಃ ನಾನು ಇವತ್ತು ಅದನ್ನು ಮುಖ್ಯಮಂತ್ರಿಯವರಿಗೆ ಹತ್ತಿರ ಪ್ರಸ್ತಾಪ ಮಾಡಿದೆ. ಇದು ಬಹಳ ಮುಖ್ಯ ಇದೆ; ಏಕೆಂದರೆ ಕಳೆದ ಏಪ್ರಿಲ್‌ನಿಂದ ಇವತ್ತಿನವರೆಗೂ ಅಲ್ಲಿ 16 ಜನರು ತಮ್ಮ ಪ್ರಾಣ ಕಳೆದುಕೊಂಡಿದ್ದಾರೆ. ಅಲ್ಲಿ ಸರ್ಕಾರದಿಂದ ಗಾಂಭೀರ್ಯತೆ ಬರಬೇಕಾಗುತ್ತದೆ. ಇಲ್ಲಿ ಮಾನ್ಯ ಪಾರ್ಲಿಮೆಂಟರಿ ಅಫೇರ್ಸ್ ಮಿನಿಷ್ಟರ್ ಇದ್ದಾರೆ. ಇವತ್ತು ಅದರ ಬಗ್ಗೆ ಒಂದು ಸಭೆ ಅಥವಾ ನಾಳೆ ನಾಡಿದ್ದು ಸಭೆ ಕರೆದರೆ ನಾವು ಬಂದು ಅದರ ಬಗ್ಗೆ ಚರ್ಚೆ ಮಾಡುವುದಕ್ಕೆ ಸಾಧ್ಯವಾಗುತ್ತದೆ.

ಶ್ರೀ ಆರ್.ಎನ್. ನಾಯಕ್ : ಸರ್ಕಾರ ದಯಮಾಡಿ ಒಂದು ಹೇಳಿಕೆಯನ್ನು ಕೊಡಲಿ, ಅದು ಸಭೆ ಮಾಡುವುದಕ್ಕೆ ಆಗುವುದಿಲ್ಲ.

ಶ್ರೀ ಆರ್.ವಿ. ದೇಶಪಾಂಡೆ : ಇಲ್ಲಿ ಚರ್ಚೆ ಮಾಡಬೇಕಾಗುತ್ತದೆ. ಏನೂ ಬೇರೆ ಮಾರ್ಗ ಇಲ್ಲ. ಸರ್ಕಾರ ಸಭೆ ಮಾಡಲಿಲ್ಲ ಎಂದರೆ, ನಾವು ನೀವು ಕೂಡಿ ಇಲ್ಲಿ ಚರ್ಚಿಸಬೇಕಾಗುತ್ತದೆ.

ಶ್ರೀ ಆರ್.ಎನ್. ನಾಯಕ್ : ಇಲ್ಲಿ ಚರ್ಚೆಯಾಗಲಿ; ಸಭೆಗೆ ನಮ್ಮನ್ನೂ ಕರೆಯಿರಿ. ಇಲ್ಲಿಯೂ ಸ್ವಲ್ಪ ಹೊತ್ತು ಚರ್ಚೆಯಾಗಲಿ.

ಶ್ರೀ ಆರ್.ವಿ. ದೇಶಪಾಂಡೆ : ಅವರು ಸಭೆ ಕರೆಯುತ್ತೇವೆ ಎಂದು ಹೇಳಿದ್ದಾರೆ. ಕರೆಯುತ್ತೇವೆ ಎಂದು ಹೇಳಿದಾಗ ನೀವು ಕರೆಯಬೇಡಿ ಎಂದು ಹೇಳುವುದಕ್ಕಾಗುವುದಿಲ್ಲ. ಅದು ಸರಿಯಲ್ಲ. ಈ ಸಮಸ್ಯೆ ಬಗೆಹರಿಸಬೇಕಾಗಿದೆ. ಇಲ್ಲಿ ಯಾವ ರಾಜಕೀಯ ಮಾಡುವ ಉದ್ದೇಶ ಇಲ್ಲ. ಭಟ್ಕಳದಲ್ಲಿ ಶಾಂತಿ ಉಂಟುಮಾಡುವುದು ನಮ್ಮ ಧರ್ಮ ಮತ್ತು ಕರ್ತವ್ಯವಾಗುತ್ತದೆ. ಎರಡನೆಯದಾಗಿ ನಾನು ಮತ್ತೊಂದು ಮನವಿ ಮಾಡಿದ್ದೆ. ಜೀರೋ ಅವರ್‌ನಲ್ಲಿ ಯಾವುದೂ ಬಂದಿಲ್ಲ. ತಮಗೆ ಒಂದು ವಿಷಯದ ಬಗ್ಗೆ ನೋಟೀಸ್ ಕೊಟ್ಟಿದ್ದೇನೆ. ಅದನ್ನು ಸರ್ಕಾರಕ್ಕೆ ಕಳುಹಿಸಿ ಅದಕ್ಕೆ ಉತ್ತರ ತರಿಸಿ ಕೊಡಬೇಕು.

ಅಧ್ಯಕ್ಷರು : ಅದನ್ನು ಅವರಿಗೆ ಕಳುಹಿಸಿದ್ದೇನೆ.

ಶ್ರೀ ಆರ್.ವಿ. ದೇಶಪಾಂಡೆ : ನಾನು ಮತ್ತು ನಾಯಕ್‌ರವರು ಇಬ್ಬರೂ ಸೇರಿ ಜೀರೋ ಅವರ್‌ನಲ್ಲಿ ಕಳುಹಿಸಿಕೊಟ್ಟಿದ್ದೇವೆ. ಹೊನ್ನಾವರದಲ್ಲಿ 8 ಜನ ಪ್ರಾಣ ಕಳೆದುಕೊಂಡಿದ್ದಾರೆ. ಕೊಂಕಣ ರೈಲ್ವೆ ಕೆಲಸ ನಡೆಯುವಾಗ ಒಬ್ಬರು ಬಾವಿಯಲ್ಲಿ ಬಿದ್ದು ಹಾಗೂ ಮತ್ತೊಬ್ಬರು ಮನೆ ಕುಸಿದು ಬಿದ್ದು ಮೃತಪಟ್ಟಿದ್ದಾರೆ. ಅವರಿಗೆ ಏನು ಮಾಡುತ್ತೀರಿ? ಅದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ? ಅಲ್ಲಿ ಜನ ಏನು ಗಾಯಗೊಂಡಿದ್ದಾರೆ? ಅವರಿಗೆ ಏನು ಪರಿಹಾರ ಕೊಡುತ್ತೀರಿ? ಇದು ಸದನಕ್ಕೆ ಗೊತ್ತಾಗಬೇಕು. ತಾವು ಅದಕ್ಕೆ ಇವತ್ತು ಸಂಜೆ ಉತ್ತರ ಕೊಡುವ ವ್ಯವಸ್ಥೆ ಮಾಡಿ.

ಶ್ರೀ ಆರ್.ಎನ್.ನಾಯಕ್ : ಮಾನ್ಯ ಅಧ್ಯಕ್ಷರೇ, ಭಟ್ಕಳದ ವಿಚಾರ ಬಹಳ ಪ್ರಾಮುಖ್ಯ ಇದೆ. ಅಲ್ಲಿ ಬಹಳ ಗದ್ದಲ ಇದೆ. ಬಹುಶಃ ಅಲ್ಲಿ ಮಂತ್ರಿಗಳು ಸಹ ಹೋಗುವುದಕ್ಕೆ ಆಗುವುದಿಲ್ಲ. ಅಂತಹ ಒಂದು ಸಂದರ್ಭ ಇದೆ. ಮಂತ್ರಿಗಳು ಹೋಗಿ ಈಚೆ ಬರುವುದರಲ್ಲಿ ಗದ್ದಲ ಪ್ರಾರಂಭವಾಗುತ್ತದೆ. ದಯಮಾಡಿ ಮುಖ್ಯಮಂತ್ರಿಗಳು,

ಪೋಲೀಸ್ರಿಗಾದರೂ ಸ್ವಲ್ಪ ಎಚ್ಚರವಾಗುವ ಹಾಗೆ ಹೇಳಿಕೆ ಕೊಡದೆ ನಮಗೆ ಇಲ್ಲಿ ಮಾತನಾಡುವುದಕ್ಕೆ ಅವಕಾಶ ಕೊಡದೇ ಹೋದರೆ ನಾವು ನಮ್ಮ ಕ್ಷೇತ್ರಕ್ಕೆ ಹೇಗೆ ಹೋಗಬೇಕು ಹಾಗೂ ಜನತೆಗೆ ಹೇಗೆ ಉತ್ತರ ಕೊಡಬೇಕು ಎನ್ನುವುದನ್ನು ಸ್ವಲ್ಪ ನೋಡಬೇಕು. ಬೇರೆ ವಿಚಾರವನ್ನು ಬದಿಗೆ ಇಡಿ. ಇಲ್ಲಿ ಸುಮ್ಮನೆ ತೌಡು ಗುದ್ದಿ ಎಣ್ಣೆ ತೆಗೆಯುವುದಕ್ಕಾಗುವುದಿಲ್ಲ. ಇಲ್ಲಿ ಅವಿಶ್ವಾಸ ನಿರ್ಣಯ ತೆಗೆದುಕೊಂಡರೆ ಈ ವಿಚಾರ ಬಿಟ್ಟು ಹೋಗುತ್ತದೆ. ಅದಕ್ಕೆ ಅಷ್ಟೆಲ್ಲಾ ಇಂಪಾರ್ಟೆನ್ಸ್ ಕೊಡೋದು ಬೇಡ. ಇದಕ್ಕೆ ದಯಮಾಡಿ ಪ್ರಾಮುಖ್ಯತೆ ಕೊಡಿ.

11.10 ಎಎಂ.

ಶ್ರೀ ಹಾರನಪಳ್ಳಿ ರಾಮಸ್ವಾಮಿ : ಮಾನ್ಯ ಅಧ್ಯಕ್ಷರೇ, ಈಗಾಗಲೇ ಮಾನ್ಯ ಮುಖ್ಯ ಮಂತ್ರಿಗಳು ಉತ್ತರಕನ್ನಡ ಜಿಲ್ಲೆಯ ಶಾಸಕರ ಜೊತೆಯಲ್ಲಿ ಇದರ ಬಗ್ಗೆ ಮಾತನಾಡುತ್ತೇನೆಂದು ಹೇಳಿದ್ದಾರೆ. ಅವರು ಸಭೆಗೆ ಬಂದಮೇಲೆ ಮಾನ್ಯ ಉತ್ತರಕನ್ನಡ ಜಿಲ್ಲೆ ಶಾಸಕರ ಜೊತೆ ಯಾವಾಗ ಮಾತನಾಡುತ್ತಾರೆನ್ನುವುದನ್ನು ತಿಳಿಸುತ್ತಾರೆ. ಅವರ ಹತ್ತಿರ ಮಾತನಾಡಿ; ಸಮಾಧಾನವಾಗದೆ ಹೋದರೆ ಮುಂದಿನದ್ದು ಮಾನ್ಯ ನಾಯಕರು ಹೇಳಿದಹಾಗೆ.

ಶ್ರೀ ರಮಾನಾಥ ರೈ (ಗೃಹ ರಾಜ್ಯ ಸಚಿವರು) : ಸ್ಟೇಟ್ಮೆಂಟ್ ಮಾಡುತ್ತೇವೆಂದು ಹೇಳಿದ್ದೇವಲ್ಲ.

ಶ್ರೀ ಆರ್.ಎನ್.ನಾಯಕ್ : ಮಾತನಾಡಬೇಕಾದರೆ ನಿಧಾನವಾಗಿ ಮಾತನಾಡಿ. ಮಾತನಾಡಲು ಯಾವಾಗಲೂ ಟೈಮ್ ಇದೆ. ಅಲ್ಲಿಯ ಪರಿಸ್ಥಿತಿಯ ಬಗ್ಗೆ ಸ್ಟೇಟ್ಮೆಂಟ್ ಮಾಡುತ್ತೇವೆಂದು ಹೇಳಿದ್ದಾರೆ. ಪೋಲೀಸರು ಸಂಪೂರ್ಣವಾಗಿ ನಿಷ್ಕ್ರಿಯರಾಗಿದ್ದಾರೆ. ಭಟ್ಕಳದಲ್ಲಿ ಸರ್ಕಾರ ಇಲ್ಲ, ಇದು ಎಲ್ಲರಿಗೂ ಗೊತ್ತಿರುವ ವಿಚಾರ, ಹೀಗಿರುವಾಗ ಒಂದು ಹೇಳಿಕೆಯನ್ನು ಮಾಡಬೇಕಲ್ಲಾ, ಈಗ ನಾನು ಏನು ಮಾಡಬೇಕು? ಜನರಿಗೆ ಏನು ಉತ್ತರವನ್ನು ಕೊಡಬೇಕು? ಜನರು ಅಲ್ಲಿ ಸಾಯಬೇಕೇ? ಇಷ್ಟು ನೆಗ್ಲೆಕ್ಟ್ ಮಾಡಿದರೆ ಹೇಗೆ? ಇಲ್ಲಿ ನನ್ನ ಸಹಾಯಕ್ಕೆ ಯಾರೂ ಬರುವುದಿಲ್ಲ. ಮಾನ್ಯ ಕಾಗೋಡು ತಿಮ್ಮಪ್ಪನವರೇ, ಸ್ವಲ್ಪ ಸಹಾಯಕ್ಕೆ ಬನ್ನಿ. ತಾವು ಸ್ವಲ್ಪ, ನಾನು ಏನು ಮಾಡಲಿ? ನಮ್ಮ ಜಿಲ್ಲಾ ಶಾಸಕರು ಏನು ಮಾಡುತ್ತಿದ್ದಾರೆ? ಮಾನ್ಯ ರಾಣೆಯವರೇ, ತಾವು ಮಂತ್ರಿಗಳು; ತಾವು ಹೇಳಿ ಇಂಥ ಒಂದು ದೊಡ್ಡ ವಿಚಾರವಿರುತ್ತದೆ.

ಶ್ರೀ ರಮಾನಾಥ ರೈ : ಇದರ ಜವಾಬ್ದಾರಿಯನ್ನು ಎಲ್ಲರೂ ತೆಗೆದುಕೊಳ್ಳಬೇಕಾಗುತ್ತದೆ. ಸರ್ಕಾರವಿಲ್ಲವೆಂದರೆ ಯಾವರೀತಿ ಹೇಳಲಿ, ಈ ರೀತಿ ಮಾನ್ಯ ಸದಸ್ಯರು ಹೇಳಬಾರದು.

ಶ್ರೀ ಆರ್.ಎನ್. ನಾಯಕ್ : ನಾನು ನಿಮ್ಮ ಹಾಗೆ ಉದ್ರೇಕಗೊಳ್ಳುವುದಿಲ್ಲ. ನೀವು ಮಿನಿಸ್ಟರಿರುತ್ತೀರಿ; ನೀವು ಬಲಾಢ್ಯರಿರುತ್ತೀರಿ; ನೀವು ಶಕ್ತಿ ಇದ್ದವರು, ಸರ್ಕಾರದಲ್ಲಿ ಕ್ಯಾಬಿನೇಟ್ನಲ್ಲಿರುವವರು.

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಸದಸ್ಯರು ಆ ಕ್ಷೇತ್ರದಿಂದ ಬಂದವರಿರುತ್ತಾರೆ. ಅವರಿಗ ಹೆಚ್ಚಿನ ಚಿಂತನೆ ಇರುತ್ತದೆ. ನಮಗೂ ಚಿಂತನೆ ಇದೆ. ನಾವು ಅಲ್ಲಿಗೆ ಹೋಗಿ ಭೇಟಿ ಕೊಟ್ಟಿದ್ದೇವೆ, ಪ್ರಸ್ತಾಪ ಮಾಡಿದ್ದೇವೆ. ಆ ಜಿಲ್ಲೆಯ ಎಲ್ಲಾ ಶಾಸಕರಿಗೂ ಚಿಂತನೆ ಇದೆ. ಏತಕ್ಕೆಂದರೆ ಜಿಲ್ಲೆಯಲ್ಲಿ ಶಾಂತಿಯನ್ನು ಮೂಡಿಸುವ ಪ್ರಶ್ನೆ ಇದೆ. ಆ ವಿಚಾರದಲ್ಲಿ ಯಾವ ಶಾಸಕರಿಗೂ ಭಿನ್ನಾಭಿಪ್ರಾಯವಿಲ್ಲ. ಗಲಾಟೆ ಹೀಗೆಯೇ ನಡೆಯಬೇಕೆಂದು ಯಾರಿಗೂ ಉದ್ದೇಶ ಇಲ್ಲ. ಇದು ಒಂದು ಪಕ್ಷಾತೀತವಾದ ಕೆಲಸವಾಗಿದೆ. ಹಾಗಾಗಿ ಎಲ್ಲರೂ ಕೂಡ ಇದಕ್ಕೆ ಸಹಾಯ ಸಹಾಯ ಮಾಡಬೇಕಾಗುತ್ತದೆ. ಆದ್ದರಿಂದ ಸರ್ಕಾರ ಇನ್ನು ಆರು ದಿವಸದಲ್ಲಿ ಉತ್ತರ ಕೊಡಬೇಕು, ಅದನ್ನು

ಸಂಪೂರ್ಣವಾಗಿ ಒಪ್ಪಿಕೊಳ್ಳಬೇಕು. ಆರು ದಿವಸದ ಒಳಗಾಗಿ ಅದರ ಬಗ್ಗೆ ಸ್ಟೇಟ್‌ಮೆಂಟ್ ಮಾಡಲು ಮೀಟಿಂಗ್ ಇಟ್ಟಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಬಂದ ತಕ್ಷಣ ಬೇಕಾದರೆ ಮೀಟಿಂಗ್ ಕರೆಯಲಿ ಅಥವಾ ಸ್ಟೇಟ್‌ಮೆಂಟ್ ಮಾಡಲಿ. ಏತಕ್ಕೆಂದರೆ ಜನರಿಗೆ ಅದು ಗೊತ್ತಾಗಬೇಕಲ್ಲಾ.

ಶ್ರೀ ಆರ್. ಎನ್. ನಾಯಕ್ : ಮಾನ್ಯ ರೈರವರೇ; ಏನು ಹೇಳುತ್ತೀರೋ ಹೇಳಿ; ತಾವು ಏನು ಸ್ಟೇಟ್‌ಮೆಂಟ್ ಮಾಡುತ್ತೀರೋ ಮಾಡಿ. ತಾವು ಇದ್ದೀರಲ್ಲಾ, ತಾವು ಏನು ಮಾಡುತ್ತಿದ್ದೀರಿ? ನೀವು ಹೋಗಿಬಂದಿರಲ್ಲಾ; ಅಲ್ಲಿಯ ಜನರು ಸಾಯುತ್ತಿದ್ದಾರೆ, ನೀವು ಏನು ಕೆಲಸ ಮಾಡುತ್ತಿದ್ದೀರಿ, ಅದನ್ನು ಹೇಳಿ? ನೀವು ಏತಕ್ಕೆ ಸುಮ್ಮನೆ ಕುಳಿತಿದ್ದೀರಿ, ರಾಜಿನಾಮೆಯನ್ನು ಕೊಡಿ; ಕೊಡಿ ರಾಜಿನಾಮೆ, ಸುಮ್ಮನೆ ಮಧ್ಯೆ ಮಾತನಾಡುತ್ತೀರಲ್ಲಾ.

ಅಧ್ಯಕ್ಷರು : ಮಾನ್ಯ ಆರ್. ಎನ್. ನಾಯಕರೇ, ತಾವು ಕುಳಿತುಕೊಳ್ಳಿ.

ಶ್ರೀ ರಮಾನಾಥ ರೈ : ನಾವು ಸಹ ಹೋಗಿದ್ದೆವು.

ಶ್ರೀ ಆರ್. ಎನ್. ನಾಯಕ್: ಮಾನ್ಯ ಸಗೀರ್ ಅಹಮದ್‌ರವರು ಹೋಗಿಬಂದರಂತೆ. ಸಗೀರ್ ಅಹಮದ್‌ರವರು ಅಲ್ಲಿಗೆ ಹೋಗಿ ಶಾಂತಿ ಸ್ಥಾಪನೆ ಮಾಡಲು ಪ್ರಯತ್ನ ಮಾಡಿದರು. ಅವರು ಮಾಡಿದ್ದೇನೆಂದರೆ ಅಲ್ಲಿಯ ಶಾಸಕರು ತಾವು ಹೋದಾಗ ಬರಲಿಲ್ಲ. ಸಗೀರ್ ಅಹಮದ್‌ರವರು ಯಾರೆನ್ನುವುದು ನನಗೆ ಗೊತ್ತಿಲ್ಲ. ಅವರು ಮಂತ್ರಿಯಾದುದು ನನಗೆ ಏನೂ ಗೊತ್ತಿಲ್ಲ. ಸಗೀರ್ ಅಹಮದ್‌ರವರು ಯಾರು ಎನ್ನುವುದು ನನಗೆ ಏನೂ ಗೊತ್ತಿಲ್ಲ. ಅವರು ನನಗೆ ನೋಟಿಸ್ ಕೊಟ್ಟಿದ್ದು ಗೊತ್ತಿಲ್ಲ. ಅವರು ಬಂದಾಗ ನೋಟಿಸ್ ಕೊಟ್ಟಿದ್ದರೆ ನಾನು ಸಹ ಬರುತ್ತಿದ್ದೆ.

ಅಧ್ಯಕ್ಷರು : ಮಾನ್ಯ ಆರ್. ಎನ್. ನಾಯಕರೇ, ನಾನು ಹೇಳುವ ಮಾತನ್ನು ಸ್ವಲ್ಪ ಕೇಳಿ. ತಮ್ಮ ಕಳಕಳಿಯನ್ನು ಅರ್ಥಮಾಡಿಕೊಂಡಿದ್ದೇನೆ. ತಾವು ಕುಳಿತುಕೊಳ್ಳಿ.

ಶ್ರೀ ರಮಾನಾಥ ರೈ : ಮಾನ್ಯ ಅಧ್ಯಕ್ಷರೇ, ನಾವು ಜವಾಬ್ದಾರಿಯುತವಾಗಿ ಇಲ್ಲಿಂದ ಅಲ್ಲಿಯತನಕ ಹೋಗಿ ಎರಡೆರಡು ಸಾರಿ ಮೂರು ಸಾರಿ ಹೋಗಿ ನಮಗೆ ಎಷ್ಟು ಸಾಧ್ಯವಿದೆ ಅಷ್ಟೂ ಮಾಡಿದ್ದೇವೆ.

(ಗೊಂದಲ)

ಶ್ರೀ ಎಂ.ವಿ. ವೆಂಕಟಪ್ಪ : ಮಾನ್ಯ ಅಧ್ಯಕ್ಷರೇ, ಬಹುಶಃ ಇವತ್ತಿನ ಕಾರ್ಯಕ್ರಮದ ಪಟ್ಟಿಯನ್ನು ನೋಡಿದಾಗ ಇವತ್ತಿಗೆ ಅಸೆಂಬ್ಲಿ ಮುಗಿಯುತ್ತದೆಂದು ನನಗೆ ಕಾಣಿಸುತ್ತದೆ. ಇವತ್ತೇ ಕೊನೆಯ ದಿವಸ. ಆರು ಜಿಲ್ಲೆಗಳಿಗೆ ಬರಗಾಲ ಬಂದಿದೆ.

ಶ್ರೀ ಹಾರನಹಳ್ಳಿ ರಾಮಸ್ವಾಮಿ : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಏನು ಹೇಳಿದರು ಅದರ ಬಗ್ಗೆ ಮುಂದಿನ ಕ್ರಮ ತೆಗೆದುಕೊಳ್ಳುತ್ತೇನೆ. ನಾವೂ ಕೂಡಾ ಮಾನ್ಯ ಮುಖ್ಯಮಂತ್ರಿಗಳ ಜೊತೆಯಲ್ಲಿ ಈ ವಿಷಯದ ಬಗ್ಗೆ ಮಾತನಾಡುತ್ತೇವೆ.

ಶ್ರೀ ಆರ್.ಎನ್. ನಾಯಕ್ : ಮಾನ್ಯ ಅಧ್ಯಕ್ಷರೇ, ಅವರು ಮಾತನಾಡುವುದು ಸರಿ, ಸರ್ಕಾರ ಗಮನಹರಿಸಿ ಅಲ್ಲಿನ ಪರಿಸ್ಥಿತಿಯನ್ನು ನೋಡಬೇಕು. ಅಲ್ಲಿಯ ಪೋಲೀಸ್‌ನವರು ಏನೂ ಕೆಲಸ ಮಾಡುತ್ತಿಲ್ಲ.

ಮೈದಾನ ಪ್ರದೇಶ ಅಭಿವೃದ್ಧಿ ಮಂಡಳಿ ರಚಿಸುವ ಬಗ್ಗೆ

ಶ್ರೀ ಎಂ. ವಿ ವೆಂಕಟಪ್ಪ : ಮಾನ್ಯ ಅಧ್ಯಕ್ಷರೇ, ಇವತ್ತು ಕೊನೆಯ ದಿವಸ ಎಂದು ಕಾಣುತ್ತದೆ. ಮಾನ್ಯ ಮುಖ್ಯಮಂತ್ರಿಗಳು ಬೆಂಗಳೂರು ಡಿವಿಜನ್ನಿನ ಶಾಸನಸಭಾ ಸದಸ್ಯರು ಮತ್ತು ಪಾರ್ಲಿಮೆಂಟ್ ಸದಸ್ಯರನ್ನು ಕರೆದಾಗ ಮೈದಾನ ಪ್ರದೇಶ ಅಭಿವೃದ್ಧಿ